

# ಉಪಗ್ರಹದ ರೂಪದಲ್ಲಿ ಮರಳಿಬಂದ ಅಪ್ಪು

ಕಲೆಯ ಚೆಲುವಿನೊಂದಿಗೆ ವ್ಯಕ್ತಿತ್ವದ ಸೊಗಸೂ ಸೇರಿಕೊಂಡಲ್ಲಿ ದೊರೆಯುವ ಜನಮನ್ನಣೆಗೆ ಉತ್ತಮ ಉದಾಹರಣೆ ಪುನೀತ್ ರಾಜಕುಮಾರ್. ಅವರ ಅಕಾಲಿಕ ಮರಣ ಕನ್ನಡನಾಡನ್ನು ವಿಚಲಿತಗೊಳಿಸಿತು. ಅವರ ಸಾವನ್ನು ಒಪ್ಪಿಕೊಳ್ಳದವರಂತೆ ಲಕ್ಷ ಲಕ್ಷ ಜನ ತಮ್ಮ ಮಾತು, ನೆನಪು ಮತ್ತು ಕೃತಿಗಳ ಮೂಲಕ ಪುನೀತ್ ಅವರನ್ನು ಮತ್ತೆ ಮತ್ತೆ ಜೀವಗೊಳಿಸುತ್ತಲೇ ಇದ್ದಾರೆ. ಈ ಸಾಲಿಗೆ ಹೊಸ ಸೇರ್ಪಡೆ 'ಪುನೀತ್ ಉಪಗ್ರಹ'. ಅಪ್ಪು ಎಳೆಯರ ಮೆಚ್ಚಿನ 'ಪವರ್ ಸ್ಟಾರ್', 'ಅಣ್ಣಾಬಾಂಡ್'. ಅವರ ಹೆಸರಿನ ಉಪಗ್ರಹವನ್ನು ಇಸ್ರೋ ಮಾರ್ಗದರ್ಶನದಲ್ಲಿ ಮಕ್ಕಳೇ ರೂಪಿಸಿರುವುದು, ಅದರಲ್ಲೂ ಸರ್ಕಾರಿ ಶಾಲೆಯ ಮಕ್ಕಳು ರೂಪಿಸಿರುವುದು ವಿಶೇಷ. ಅಭಿಮಾನ ಮತ್ತು ವಿಜ್ಞಾನ ಎರಡೂ ಸಮ್ಮಿಳನಗೊಂಡ ಅಪೂರ್ವ ವಿದ್ಯಮಾನವಿದು. ಉಡಾವಣೆಗೆ ದಿನಗಣನೆ ಆರಂಭವಾಗಿರುವ ಪುನೀತ್ ಉಪಗ್ರಹ ರೂಪುಗೊಂಡ ಕಥನ ಈ ಸಂಚಿಕೆಯ ವಿಶೇಷ.

■ ಗುರುರಾಜ್ ಎಸ್. ದಾವಣಗೆರೆ